# ಶುಭವಾರ್ತೆ

## ಓದುಗರಿಗೆ

ನಿಮ್ಮಲ್ಲಿ ಅನೇಕರು ನಾವು ಕಳುಹಿಸಿದ ಸತ್ಯವೇದದಲ್ಲಿನ ಅನೇಕ ವಿಷಯುಗಳನ್ನು ಕುರಿತ ಕಿರು ಹೊತ್ತಿಗೆ/ಕರಪತ್ರಗಳನ್ನು ಓದಿರುತ್ತೀರಿ. ಅನೇಕರು ಅವುಗಳನ್ನು ಮಾಸಿಕವೆಂದೆಣಿಸಿ ನಂತರದಲ್ಲಿ ತಮಗೆ ಅವುಗಳು ಕ್ರಮವಾಗಿ ಬರುತ್ತಿಲ್ಲವೆಂದು ತಿಳಿಸಿರುತ್ತಾರೆ. ಕನ್ನಡದಲ್ಲಿ ನಾವು ಒಂದು ಮಾಸಿಕವನ್ನು ಹೊರಡಿಸಬೇಕೆಂದು ಆಲೋಚಿಸಿದಾಗ್ಯೂ ಅದು ಕಾರ್ಯ ರೂಪಕ್ಕೆ ಬರಲು ತಡವಾಗಿದೆ. ಆದ್ದರಿಂದ ನಮ್ಮ ಪ್ರಿಯ ಓದುಗರಿಗೆ ನಿರಾಶೆಯಾಗದಿರಲು ಮತ್ತು ಅವರು ನಿಜವಾದ ಸುವಾರ್ತೆಯನ್ನು ಕಂಡು ಕೊಳ್ಳಲು ಸಹಕಾರಿಯಾಗಲು ದೇವರ ಚಿತ್ತವಾದಲ್ಲಿ ಪ್ರತಿ ತಿಂಗಳೂ ದೇವರ ವಾಕ್ಯದಲ್ಲಿ ಆಯ್ದ. ಭಾಗಗಳೊಂದಿಗೆ ವಿವರಣೆಯನ್ನು ಕೊಟ್ಟು ಒಂದು ಕಿರುಹೊತ್ತಿಗೆಯನ್ನು ತಲುಪಿಸಲು ಪ್ರಯತ್ನಿಸುತ್ತೇವೆ.

ಇದರಲ್ಲಿ ಬರುವ ವಿಷಯುಗಳು ಸತ್ಯವೇದದಲ್ಲಿನ ಸುವಾರ್ತೆಗೆ ಸರಿಯಾಗಿದ್ದು ಅವುಗಳಿಂದ ಓದುಗರು ಆತ್ಮೀಯ ಲಾಭವನ್ನು ಹೊಂದುವರೆಂಬ ನಿರೀಕ್ಷೆಯಿಟ್ಟು ಕೊಂಡಿರುತ್ತೇವೆ. ಈ ಸತ್ಯ ಸುವಾರ್ತೆಯನ್ನು ನಿಮ್ಮ ಬಂಧು ಬಾಂಧವರೊಂದಿಗೆ ಹಂಚಿಕೊಳ್ಳ ಬೇಕೆಂದು ನಮ್ಮ ವಿನಂತಿ.

ಈ ನೂತನ ವರ್ಷದಿಂದ ನಾವು ಕರ್ನಾಟಕ ಪ್ರಾಂತ್ಯಕ್ಕಾಗಿ ಬೆಂಗಳೂರಿನಲ್ಲಿ ಒಂದು ಕೇಂದ್ರವನ್ನು ಪ್ರಾರಂಭಿಸಿರುತ್ತೇವೆ.

ನ್ಯೂಜಿಲೆಂಡ್ ದೇಶದಿಂದ ನಮ್ಮ ಸಹೋದರ./ ರೇ ಅಲಾನ್‌ಸನ್ ದಂಪತಿಗಳು ಇಬ್ಬರು ಮಕ್ಕಳೊಂದಿಗೆ ಬೆಂಗಳೂರಿಗೆ ಬಂದು ಇಲ್ಲಿಯೇ ನೆಲಸಿ ಸುವಾರ್ತಾ ಸೇವೆ ಮಾಡಲು ನಿರ್ಧರಿಸಿದ್ದಾರೆ. ಅವರಿಗೆ ನಾವು ಸುಸ್ವಾಗತವನ್ನು ಕೋರಿ ಅವರು ಮಾಡುವ ಕರ್ತನ ಸೇವೆಯಲ್ಲಿ ನಾವೆಲ್ಲರೂ ಸಹಕಾರಿಗಳಾಗಿದ್ದು ಕೊಂಡು ದೇವರು ಅವರಿಗೆ ಬೇಕಾದ ಬಲ, ಧೈರ್ಯ ಜ್ಞಾನವನ್ನು ದಯಪಾಲಿಸಲೆಂದು ಪ್ರಾರ್ಥಿಸೋಣ.

ಉಚಿತ
ಮಾರಾಟಕ್ಕಿಲ್ಲ

# ಕ್ರಿಸ್ಟಡೆಲ್ಫಿಯನ್ಸ್ ಅಂದರೆ ಯಾರು?

ಪ್ರಥಮ ಕ್ರೈಸ್ತ ಸಭೆಯ ನಂಬಿಕೆ ಹಾಗೂ ನಡವಳಿಕೆಗಳನ್ನು ಅನುಸರಿಸಲು ಪ್ರಯತ್ನಿಸುತ್ತಿರುವ ಒಂದು ಚಿಕ್ಕ ಗುಂಪಿನವರೇ ಕ್ರಿಸ್ಟಡೆಲ್ಫಿಯನ್ಸ್ ಅಂದರೆ ಕ್ರಿಸ್ತನ ಸಹೋದರರು ಎಂದರ್ಥ. (ಇಬ್ರಿಯ 2:11) ಇವರು ಪ್ರಪಂಚದ ಎಲ್ಲಡೆಗಳಲ್ಲಿಯೂ ಇದ್ದಾರೆ. ಇವರು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಸಾಮಾನ್ಯ ನಂಬಿಕೆಗಳನ್ನಿಟ್ಟಿರುವ ಒಂದು ಚಿಕ್ಕ ಗುಂಪಾಗಿದ್ದಾರೆ.

ಇವರು ಹೊಸದಾಗಿ ಪ್ರವಾದನೆಯನ್ನು ಹೊಂದಿರುವುದಾಗಿ ಬೋಧಿಸುವುದಾಗಲೀ ಅಥವಾ ವಿಶೇಷವಾಗಿ ನೇಮಕ ಹೊಂದಿದವರೆಂದಾಗಲೀ ಹೇಳಿಕೊಳ್ಳುವುದಿಲ್ಲ ಆದರೆ ಸತ್ಯವೇದವು ಹಳೆ ಮತ್ತು ಹೊಸ ಒಡಂಬಡಿಕೆಗಳೆರಡರಲ್ಲಿಯೂ ಕೂಡ ಒಬ್ಬ ಮನುಷ್ಯನ ರಕ್ಷಣೆಗೆ ಮಾರ್ಗದರ್ಶಿಯಾಗುತ್ತದೆಂದು ಮಾತ್ರ ಹೇಳುತ್ತಾರೆ. ಸತ್ಯವೇದವೇ ನಮಗೆ ಆಧಾರ ಮತ್ತು ಅದನ್ನು ಅವಕಾಶ ಸಿಕ್ಕಿದಾಗಲೆಲ್ಲಾ ಎಚ್ಚರಿಕೆಯಿಂದಲೂ ಪ್ರಾರ್ಥನೆಯಿಂದಲೂ ಕೂಡಿ ಓದ ಬೇಕೆಂದು ಅವರು ಹೇಳುತ್ತಾರೆ.

(ರೋಮಾ. 16:26; ಯೋಹಾನ 17:17; ಅ.ಕೃ. 17:11)

ಇವರು ಪ್ರಥಮ ಕ್ರೈಸ್ತರ ಹಾಗೆ ಮನೆಗಳಲ್ಲಿಯೂ, ಬಾಡಿಗೆ ಕೊಠಡಿಗಳಲ್ಲಿಯೂ ಕೆಲವು ಸ್ಥಳಗಳಲ್ಲಿಯೂ, ಸ್ವಂತ ಹಜಾರಗಳಲ್ಲಿಯೂ ಸೇರುತ್ತಾರೆ. (ಅ. ಕೃ. 1:13; 2:46; 18:7; 19:9; 28:30).

> "......ಯಾರು ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆಯುತ್ತಾರೋ ಅವರೇ ನನಗೆ......ಸಹೋದರರಾಗ ಬೇಕು"
>
> —ಲೂಕ 8:21

ನಂ. 1

ನಮ್ಮ ವಿಳಾಸ:
ದಿ ಕ್ರಿಸ್ಟಡೆಲ್ಫಿಯನ್ ವಿಷನ್ ಸೆಂಟರ್
23/4, ಬೆನ್‌ಸನ್ ರಸ್ತೆ, ಬೆಂಗಳೂರು–560 046.

ಸೂಚನೆ: ಮೇಲ್ಕಂಡ ಸ್ಥಳದಲ್ಲಿ ಪ್ರತಿ ಭಾನುವಾರ ಸಂಜೆ 6-30 ಗಂಟೆಗೆ ಸತ್ಯವೇದ ಅಧ್ಯಯನ ಕೂಟವು ನಡೆಸಲ್ಪಡುತ್ತದೆ. ಆಸಕ್ತಿಯುಳ್ಳವರಿಗೆ ಸುಸ್ವಾಗತ.)

ಇದೇ ರೀತಿಯಾದ ಕೂಟಗಳಿಗೆ ಈ ಪತ್ರಿಕೆಯಲ್ಲಿ ನಿಮ್ಮ ಹತ್ತಿರದ ವಿಳಾಸವನ್ನು ಸಂಪರ್ಕಿಸಿ.

[illegible]
[illegible]

# ಯೇಸು ಕ್ರಿಸ್ತನ ಆಜ್ಞೆಗಳು

> "ಕ್ರಿಯೆಗಳಿಲ್ಲದ ನಂಬಿಕೆಯು ವ್ಯರ್ಥವಾಗಿದೆ"
>
> — ಯಾಕೋಬ 2:20

ನಾವು ಕ್ರೈಸ್ತರು, ಅಂದರೆ ಕ್ರಿಸ್ತನವರು ಎಂದರ್ಥ. ನಾವು ಕ್ರಿಸ್ತನವರಾದ ಮೇಲೆ, ನಮ್ಮಲ್ಲಿ ಕ್ರಿಸ್ತನ ನಡವಳಿಕೆಗಳು ಇರಬೇ ಬೇಕು.

"ನಾನೇ ಮಾರ್ಗವೂ, ಸತ್ಯವೂ, ಆಗಿದ್ದೇನೆ" (ಯೋಹಾನ 14;6) ಎಂದು ಯೇಸು ಕ್ರಿಸ್ತನು ಹೇಳಿರುವ ಮಾತನ್ನು ನಾವು ಜ್ಞಾಪಿಸಿಕೊಂಡು, ಆತನ ಮಾರ್ಗದಲ್ಲಿ ನಡೆದರೆ ಮಾನವನು ಆದಾಮನ ಮೂಲಕ ಕಳೆದುಕೊಂಡ ಜೀವವನ್ನು ಪುನಃ ಪಡೆಯಬಹುದೆಂದು ತಿಳಿಯಪಡಿಸುತ್ತದೆ. ಮತ್ತೊಂದುಕಡೆ ಯೇಸು ಕ್ರಿಸ್ತನು ನೀವು ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೇ ಹೋದರೆ, ನಿಮ್ಮೊಳಗೆ ಜೀವವಿಲ್ಲ; ನನ್ನ ಮಾಂಸವನ್ನು ತಿಂದು, ನನ್ನ ರಕ್ತವನ್ನು ಕುಡಿಯುವವನು ನಿತ್ಯ ಜೀವವನ್ನು ಹೊಂದಿದ್ದಾನೆ ಮತ್ತು ನಾನು ಅವನನ್ನು ಕಡೇ ದಿನದಲ್ಲಿ ಎಬ್ಬಿಸುವೆನು" (ಯೋಹಾನ 6:53-54). ಎಂದು ಹೇಳಿದ್ದಾನೆ. ಆಗಿನ ಕಾಲದಲ್ಲಿ ಯೇಸು ಸ್ವಾಮಿಯು ಈ ಮಾತುಗಳನ್ನು ಯೆಹೂದ್ಯರಿಗೆ ಹೇಳುವಾಗ ಅವರು ಆಶ್ಚರ್ಯಪಟ್ಟರು. ಏನಿದು! ಮನುಷ್ಯನ ಮಾಂಸವನ್ನು ತಿನ್ನುವುದು ಮತ್ತು ರಕ್ತವನ್ನು ಕುಡಿಯುವುದು ಅಂದರೆ ಯೆಹೂದ್ಯರಿಗೆ ಸಲ್ಲದ ಮಾತು ಅವರಿಗೆ ಅದು ನಿಷಿದ್ಧ. ಆದರೆ ಯೇಸು ಕ್ರಿಸ್ತನು ಹೇಳಿದ ಮಾತು ಅವರಿಗೆ ಅರ್ಥವಾಗಲಿಲ್ಲ ಅವರು ಅರ್ಥ ಮಾಡಿಕೊಳ್ಳಲೂ ಪ್ರಯತ್ನಿಸಲಿಲ್ಲ.

ಇಂದು ಕ್ರೈಸ್ತರಾದವರೂ ಕೂಡ ಅನೇಕ ಸಂದರ್ಭಗಳಲ್ಲಿ ಯೇಸುಕ್ರಿಸ್ತನ ಮಾತುಗಳನ್ನೂ ಸತ್ಯವೇದ ವಾಕ್ಯಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದೂ ಇಲ್ಲ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದೂ ಇಲ್ಲ.

ಯೇಸು ಕ್ರಿಸ್ತನ ಮಾಂಸವನ್ನು ತಿನ್ನುವುದು ಮತ್ತು ರಕ್ತವನ್ನು ಕುಡಿಯುವುದು ಅಂದರೆ ಹೇಗೆ? ಒಬ್ಬ ಮನುಷ್ಯನ ಮಾಂಸ ಅಥವಾ ರಕ್ತವನ್ನು ಎಷ್ಟು ಜನರು ಸೇವಿಸಲು ಸಾಧ್ಯ? ಆತನ ಮಾಂಸ ಮತ್ತು ರಕ್ತ ಎಷ್ಟು ಕಾಲದವರೆಗೆ ದೊರೆಯಲು ಸಾಧ್ಯ? ನಾವು ಈ ರೀತಿಯಾಗಿ ಯೋಚಿಸುವುದಾದರೆ, ಯೇಸು ಕ್ರಿಸ್ತನ ಮಾತುಗಳನ್ನು

ಅಂದಿನ ಯೆಹೂದ್ಯರು ಗ್ರಹಿಸಲಾರದೇ ಹೋದಂತೆ ಅಥವಾ ತಪ್ಪಾಗಿ ಗ್ರಹಿಸಿದ ಹಾಗೆ ಇಂದೂ ಕೂಡ ನಾವು ಆತನ ಮಾತುಗಳನ್ನು ಗ್ರಹಿಸಲಾರದಾಗಿರುತ್ತೇವೆ ಅಥವಾ ತಪ್ಪಾಗಿ ಅರ್ಥ ಮಾಡಿಕೊಂಡಿರುತ್ತೇವೆಂದು ಸ್ಪಷ್ಟವಾಗುತ್ತದೆ. ಹಾಗಿಲ್ಲದ ಪಕ್ಷಕ್ಕೆ ರೊಟ್ಟಿ ಮುರಿಯುವ ಸಂಸ್ಕಾರದಲ್ಲಿ ನಾವು ರೂಢಿಯಂತೆ ಭಾಗವಹಿಸುವದರಿಂದ ಯೇಸು ಕ್ರಿಸ್ತನು ಹೇಳಿದ ಮಾತುಗಳು ನೆರವೇರಿದಂತಾಯಿತೆಂದು ಭಾವಿಸೋಣವೇ? ಖಂಡಿತವಾಗಿಯೂ ಇಲ್ಲ.

ಒಬ್ಬ ಮನುಷ್ಯನ ದೇಹದಲ್ಲಿ ಮಾಂಸ ಮತ್ತು ರಕ್ತವೆಂದರೆ ಏನು? ಅವೆರಡನ್ನೂ ಆತನ ದೇಹ ದಿಂದ ಬೇರ್ಪಡಿಸಿದರೆ ಆಗುವ ಪರಿಣಾಮವೇನು? ಅವನು ಬದುಕುವುದಿಲ್ಲ. ಅಂದರೆ ಮಾಂಸ ಮತ್ತು ರಕ್ತ ಮನುಷ್ಯನ ದೇಹದಲ್ಲಿ ಬದುಕಿನ ಮುಖ್ಯ ವಸ್ತುಗಳಾಗಿರುತ್ತವೆ. ಹಾಗಿದ್ದಲ್ಲಿ ಕ್ರಿಸ್ತನ ಮಾಂಸ ಮತ್ತು ರಕ್ತವನ್ನು ನಾವು ಸೇವಿಸದಿದ್ದಲ್ಲಿ ನಾವು ಸತ್ತಂತೆಯೇ ಎಂದು ಕ್ರಿಸ್ತನು ಹೇಳಿದ್ದಾನೆ. ಅದನ್ನು ಸೇವಿಸಿದಲ್ಲಿ, ನಮಗೆ ನಿತ್ಯ ಜೀವವು ಕೊಡಲ್ಪಡುವುದು. ಹೇಗೆ? ಇಲ್ಲಿ ಮುಖ್ಯವಾದ ಅಂಶವೆಂದರೆ, ಕ್ರಿಸ್ತನ ಮಾಂಸ ಮತ್ತು ರಕ್ತವೆಂದರೆ ಕ್ರಿಸ್ತನ ಜೀವಿತ. ಅದನ್ನು ನಾವು ಸೇವಿಸುವುದೆಂದರೆ—ಕ್ರಿಸ್ತನ ಜೀವಿತವೇ ನಮ್ಮ ಜೀವಿತವಾಗಿರಬೇಕು. ಯಾವ ರೀತಿಯಲ್ಲಿ ಕ್ರಿಸ್ತನು ತಂದೆಯ ಚಿತ್ತವನ್ನು ನೆರವೇರಿಸಿ, ಮರಣದವರೆಗೂ ವಿಧೇಯನಾದನೋ ಹಾಗೆಯೇ ನಾವೂ ಕೂಡ ಮರಣದವರೆಗೂ ಆತನಿಗೆ ವಿಧೇಯರಾಗಿರಬೇಕು. ಹೇಗೆಂದರೆ ಶ್ರೀಪೌಲನು, "ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ" (ರೋಮಾ 6;3) ಎಂದು ಹೇಳಿರುವಂತೆ, ನಾವು ಕ್ರಿಸ್ತನನ್ನು ಧರಿಸಿಕೊಂಡ ಮೇಲೆ ನಮ್ಮಲ್ಲಿ ಕಾಣಬೇಕಾದುದೇನು? ಇನ್ನು ನಾನಲ್ಲ ಜೀವಿಸುವವನು ನನ್ನಲ್ಲಿ ಕ್ರಿಸ್ತನೇ ಎಂದು ಹೇಳಿರುವ ಮಾತಿನ ಅರ್ಥವೇನು? ಇದ್ದರಿಂದ ನಾವು ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡ ಮೇಲೆ, ನಮ್ಮಲ್ಲಿ ಕ್ರಿಸ್ತನು ಜೀವಿಸಬೇಕೇ ಹೊರತು ಬೇರೆ ಅಲ್ಲ. ಹಾಗಿದ್ದಲ್ಲಿ ಯೇಸು ಕ್ರಿಸ್ತನು ಈ ಲೋಕದಲ್ಲಿರುವಾಗ ಆಜ್ಞಾಪಿಸಿರುವದನ್ನು ಮತ್ತು ಅಪೋಸ್ತಲರು ಕ್ರಿಸ್ತನ ಬಗ್ಗೆ ಹೇಳಿರುವದನ್ನು ನಾವು ಗಮನದಲ್ಲಿಟ್ಟುಕೊಂಡಲ್ಲಿ ನಮ್ಮ ಜೀವಿತ ಹೇಗಿರಬೇಕೆಂಬುದು ಸ್ಪಷ್ಟವಾಗುತ್ತದೆ.

ಯೇಸು ತನ್ನ ಶಿಷ್ಯರಿಗೆ "ಎಲ್ಲಾ ಜನಾಂಗದವರಿಗೆ ಬೋಧಿಸಿ, ದೀಕ್ಷಾಸ್ನಾನ ಮಾಡಿಸಿರಿ ಮತ್ತು ನಾನು ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿ ಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ" ಎಂದು ಹೇಳಿದನು (ಮತ್ತಾಯ 28:19-20). ದೀಕ್ಷಾಸ್ನಾನ ಕೂಡ ನಮ್ಮ ಕರ್ತನಾದ ಯೇಸು ಕ್ರಿಸ್ತನು ನೇಮಿಸಿದ ಆಜ್ಞಾವಿಧಿಗಳ

ಲ್ಲೊಂದಾಗಿದೆ. ಯೇಸು ಕ್ರಿಸ್ತನು ತಾನು ದೀಕ್ಷಾ ಸ್ನಾನ ಹೊಂದಿ ಶೋಧನೆ ನಂತರ ಮಾಡಿದ ಕಾರ್ಯವೇನು? ಪರಲೋಕ ರಾಜ್ಯದ ಸುವಾರ್ತೆಯನ್ನು ಸಾರಲು ಪ್ರಾರಂಭಿಸಿದನು. (ಮತ್ತಾಯ 4:17). ಇಂದು ಲೋಕದಲ್ಲಿ ಕ್ರೈಸ್ತರು ಅಥವಾ ಕ್ರಿಸ್ತನವರು ಎನಿಸಿಕೊಳ್ಳುವವರೆಲ್ಲರೂ ಮಾಡಬೇಕಾದ ಕಾರ್ಯ [illegible]. ದೇವರ ರಾಜ್ಯದ ಸುವಾರ್ತೆಯನ್ನು ಸಾರುವುದೇ.

ಯೇಸು ಕ್ರಿಸ್ತನು ಮತ್ತೊಂದು ವಿಧಿಯನ್ನು ಆಜ್ಞಾಪಿಸಿದ್ದಾನೆ. ಅದೇನೆಂದರೆ ರೊಟ್ಟಿ ಮುರಿಯುವುದು. ಶ್ರೀ ಪೌಲನು ಈ ಬಗ್ಗೆ ವಿವರಿಸುತ್ತಾ, ಅಂದು ರಾತ್ರಿ ಯೇಸು ಕ್ರಿಸ್ತನು ಯಾವ ರೀತಿಯಲ್ಲಿ ರೊಟ್ಟಿಯನ್ನು ಮುರಿದು ತನ್ನ ಶಿಷ್ಯರಿಗೆ ಕೊಟ್ಟು ದ್ರಾಕ್ಷಾರಸವನ್ನು ಕೂಡ [illegible] ಕೊಟ್ಟು, "ಇದನ್ನು ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ" ಎಂದು ಆಜ್ಞಾಪಿಸಿದನು (1 ಕೊರಿಂಥ 11:23-25; ಅಕೃ. 20:7; 1 ಕೊರಿಂಥ 16:2; ಇಬ್ರಿಯ 10:25)

ರೊಟ್ಟಿ ಮುರಿಯುವುದೂ ಕೂಡ ನಾವು ಮಾಡಲೇ ಬೇಕಾದ ಮತ್ತೊಂದು ಸಂಸ್ಕಾರ. ಇಷ್ಟೇ ಅಲ್ಲದೆ ಮತ್ತೂ ಕೆಲವನ್ನು ನಮಗೆ ಆಜ್ಞಾಪಿಸಿದ್ದಾನೆ. ಅವುಗಳಾವುವೆಂದರೆ :

(1) ನಾವು ದೇವರನ್ನೂ ಕ್ರಿಸ್ತನನ್ನೂ ಪ್ರೀತಿಸಬೇಕು (ಮತ್ತಾಯ 23:37; ಲೂಕ 10:27; (2) ನಾವು ಮತ್ತೊಬ್ಬರಿಂದ ಏನನ್ನು ಅಪೇಕ್ಷಿಸುತ್ತೇವೆಯೋ ಅದನ್ನು ಅವರಿಗೆ ನಾವು ಮಾಡಬೇಕು (ಮತ್ತಾಯ 7:12). (3) ಒಬ್ಬರನ್ನೊಬ್ಬರು ಪ್ರೀತಿಸ ಬೇಕು (ಯೋಹಾನ 13:34); ಇತರರ ದುಃಖ ಮತ್ತು ಸಂತೋಷಗಳಲ್ಲಿ ಭಾಗಿಗಳಾಗುವುದು (ರೋಮಾ 12:15). (15) ನಮ್ಮ ಶತೃಗಳನ್ನೂ ಕೂಡ ಪ್ರೀತಿಸ ಬೇಕು, ನಮ್ಮನ್ನು ಶಪಿಸುವವರನ್ನು ಹರಸ ಬೇಕು ನಮ್ಮನ್ನು ಹಗೆ ಮಾಡುವವರಿಗೆ ಒಳ್ಳೇದನ್ನು ಮಾಡಬೇಕು; ನಮ್ಮನ್ನು ಕೆಟ್ಟದ್ದಾಗಿ ಉಪಯೋಗಿಸುವವರಿಗಾಗಿ ನಾವು ಪ್ರಾರ್ಥಿಸ ಬೇಕು (ಲೂಕ 6:27-28; 1 ಪೇತ್ರ 3:9; ಮತ್ತಾಯ 5:44); (6) ಪ್ರತಿಯೊಂದು ಒಳ್ಳೇ ಕಾರ್ಯಕ್ಕೂ ಯಾವಾದರೂ ಬೇಡಿದರೆ ಕೊಡುವದಕ್ಕೂ ಮತ್ತು ತೊಂದರೆಗೊಳಗಾದವರನ್ನು ಬಿಡಿಸುವದಕ್ಕೂ ನಾವು ಸಿದ್ಧರಾಗಿ ಬೇಕು (ತೀತ 3:1; ಮತ್ತಾಯ 5:42; ರೋಮಾ 12:13); (7) ಅವಿಶ್ವಾಸಿಗಳೊಂದಿಗೆ ನಾವು ಸಹವಾಸಕ್ಕೆ ಬಾರದ ಬೇಕು (1 ತಿಮೋ 6:1-2); (8) ಯಾವಾಗಲೂ ಪ್ರಾರ್ಥನೆ ಮಾಡ ಬೇಕು ಮತ್ತು ಪ್ರತಿಯೊಂದರಲ್ಲಿಯೂ ಕೃತಜ್ಞತೆಯುಳ್ಳವರಾಗಿರ ಬೇಕು (ಲೂಕ 18:1; ಎಫೆಸ 5:20). (9) ಯಾವಾಗಲೂ ಸತ್ಯವನ್ನೇ ನುಡಿಯ ಬೇಕು (ಎಫೆಸ 4:25); (10) ನಿದೋ

ಗಿಯೂ ಕೆಡುಕಿಲ್ಲದವರಾಗಿಯೂ ಇರಬೇಕು (ಫಿಲಿಪ್ಪಿ 2:15). (11) ದೀನರಾಗಿಯೂ, ಧೈರ್ಯವಂತ ಮಾನವರಾಗಿಯೂ, ಸಂತೋಷಿಸುವವರೂ, ವಿನಯವುಳ್ಳವರೂ, ಯೋಗ್ಯ ಗುಣವುಳ್ಳವರೂ ಆಗಿರ ಬೇಕು (ಲೂಕ 14:11-13; ಫಿಲಿಪ್ಪಿ 4:4; 1 ಥೆಸ 5:8-10). (12) ಯಾವುದು ಸತ್ಯವಾದದ್ದೂ, ಯಥಾರ್ಥವಾದದ್ದು, ಶುದ್ಧವಾದದ್ದು, ನ್ಯಾಯವಾದದ್ದು, ಪ್ರೀತಿಯುಳ್ಳದ್ದು ಮತ್ತು ಒಳ್ಳೆಯ ವಿಷಯಗಳನ್ನುಳ್ಳದ್ದು ಅಂಥಹವುಗಳನ್ನು ನಾವು ಅನುಸರಿಸ ಬೇಕು (ಫಿಲಿಪ್ಪಿ 4:8).

## ಕ್ರೈಸ್ತನವರಾದ ನಾವು ಎಂಥಹವುಗಳನ್ನು ಮಾಡಬಾರದು

ಸತ್ಯವೇದವನ್ನು ನಾವು ಓದುವಾಗ ಯೇಸು ಕ್ರಿಸ್ತನು ಮತ್ತು ಆತನ ಶಿಷ್ಯರಾದ ಅಪೋಸ್ತಲರು ಕೆಲವು ವಿಷಯಗಳ ಬಗ್ಗೆ ನಮಗೆ ಎಚ್ಚರಿಕೆ ಕೊಟ್ಟಿರುವುದನ್ನು ನಾವು ನೋಡುತ್ತೇವೆ. ಕ್ರೈಸ್ತರಾದ ನಾವು ನಮ್ಮ ಜೀವಿತದಲ್ಲಿ ಯಾವ ರೀತಿ ಇರ ಬೇಕೆಂಬುವುದನ್ನು ಈ ಕೆಳಗಿನ ಅಂಶಗಳಾಗಿ ವಿಂಗಡಿಸಬಹುದು; —

(1) ನಮ್ಮನ್ನು ನಾವು ಹೆಚ್ಚಿಸಿಕೊಳ್ಳಬಾರದು ಮತ್ತು ಅಧಿಕಾರ ನಡೆಸುವವರಾಗಿರ ಬಾರದು (ಮತ್ತಾಯ 23:11; ಯೋಹಾನ 13:13-17).

(2) ಕೆಡುಕಿಗೆ ಕೆಡುಕನ್ನು ಹಿಂತಿರುಗಿಸ ಬಾರದು (ರೋಮಾ 12:17).

(3) ಮುಯ್ಯಿಗೆ ಮುಯ್ಯಿ ತೀರಿಸದೆ ಕೆಡುಕಿಗೆ ನಮ್ಮನ್ನು ಒಪ್ಪಿಸಿಕೊಳ್ಳ ಬೇಕು (ರೋಮಾ 12:19-20).

(4) ಜನರು ನೋಡುವಂತೆ ದಾನ ಮಾಡ ಬಾರದು. ನಮ್ಮ ಬಲಗೈ ಮಾಡುವುದು ಎಡಗೈಗೆ ತಿಳಿಯ ಬಾರದು (ಮತ್ತಾಯ 6:1-4).

(5) ಶ್ರೀಮಂತರಾಗ ಬೇಕೆಂಬ ತವಕದಿಂದ ನಾವು ದುಡಿಯ ಬಾರದು. ಅಥವಾ ಈ ಲೋಕವನ್ನು ಪ್ರೀತಿಸ ಬಾರದು [1 ತಿಮೋ 6:8]

[6] ನಾವು ಅಪಕಾರಕ್ಕೆ ಅಪಕಾರವನ್ನು ನಿಂದೆಗೆ ನಿಂದೆಯನ್ನೂ ಹಿಂದಿರುಗಿಸ ಬಾರದು. ಅದಕ್ಕೆ ಪ್ರತಿಯಾಗಿ ಹರಸ ಬೇಕು. (ಪೇತ್ರ 3:9).

(7) ನಾವು ಗೊಣಗುಟ್ಟ ಬಾರದು; ಅಪ್ರಾ ಮಾಡ ಬಾರದು; ದೂರು ಹೇಳ ಬಾರದು ಅಥವಾ ನಿಂದಿಸ ಬಾರದು. (ಯಾಕೋಬ 4:11; ಮತ್ತಾಯ 7:1; ಫಿಲಿಪ್ಪಿ 2:14).

(8) ನಾವು ಕೋಪಕ್ಕೆ, ಕ್ರೋಧಕ್ಕೆ ದ್ವೇಷಕ್ಕೆ ಮತ್ತು ಕೆಟ್ಟ ಮಾತಿಗೆ ಅವಕಾಶ ಕೊಡ ಬಾರದು. (ಎಫೆಸ 4:31; ಪೇತ್ರ 2:1).

(9) ನಾವು ಈ ಲೋಕದವರಂತಾಗ ಬಾರದು ಅಥವಾ ಹೆಚ್ಚಿನವುಗಳಿಗೆ ಅತಿ ಆಸೆ ಪಡ ಬಾರದು (ರೋಮಾ 12:2; 16).

(10) ನಮ್ಮ ಸಾಲವನ್ನು ಹಿಂದಿರುಗಿಸುವಲ್ಲಿ ನಾವು ತಡ ಮಾಡ ಬಾರದು (ರೋಮಾ 13:8).

(11) ಮತ್ತೊಬ್ಬರ ವಿಷಯದಲ್ಲಿ ಮೊದಲು ಅವರೊಂದಿಗೆ ಮಾತನಾಡದೆ ಅವರ ಹಿಂದುಗಡೆ (ಅಂದರೆ ಅವರಿಲ್ಲದಾಗ) ಮಾತನಾಡುವುದಾಗಲೀ ಅವರ ತಪ್ಪುಗಳ ವಿಷಯವನ್ನು ಮಾತಾಡುವುದಾಗಲೀ ಮಾಡ ಬಾರದು. (ಮತ್ತಾಯ 8;15; ಯಾಕೋಬ 5:19-20).

(12) ನಾವು ಸೂಳೆಗಾರಿಕೆ, ವ್ಯಭಿಚಾರ, ಅಶುದ್ಧತೆ, ಕುಡಿತ, ಪರರ ಸ್ವತ್ತಿನ ಆಶೆ, ಕ್ರೋಧ, ವ್ಯಾಜ್ಯ ಸಂಚು, ದ್ವೇಷ, ಈರ್ಷ್ಯೆ, ಜಂಬ, ಒಡಾಯ, ಹೊಟ್ಟೆಕಿಚ್ಚು ಹಾಸ್ಯ ಅಥವಾ ಹುಚ್ಚು ಮಾತು ಇವುಗಳಿಂದ ತಪ್ಪಿತಸ್ಥರಾಗ ಬಾರದು. (ಎಫೆಸ 5;3-7).

ಈ ಮೇಲ್ಕಂಡ ವಿಷಯಗಳಲ್ಲಿ ನಾವು ಜಾಗರೂಕರಾಗಿದ್ದು ನಮ್ಮ ನಡವಳಿಕೆಗಳನ್ನು ಸರಿಪಡಿಸಿಕೊಳ್ಳುವುದು ಬಹು ಮುಖ್ಯವಾದದ್ದು.

## ಈ ಆಜ್ಞೆಗಳಿಗೆ ನಾವು ಅವಿಧೇಯರಾದರೂ ಸುವಾರ್ತೆಯು ನಮ್ಮನ್ನು ರಕ್ಷಿಸುತ್ತದೋ?

ಈ ಪ್ರಶ್ನೆಯು ನಮ್ಮಲ್ಲಿ ಅನೇಕರಿಗೆ ಉದ್ಭವಿಸ ಬಹುದು. ಆದರೆ ದೇವರ ವಾಕ್ಯವನ್ನು ನಾವು ಓದುವಾಗ ಈ ಪ್ರಶ್ನೆಗೆ 'ಇಲ್ಲ' ಎಂಬ ಉತ್ತರ ದೊರೆಯುತ್ತದೆ. ನಾವು ಕ್ರಿಸ್ತನ ಆಜ್ಞೆಗಳಿಗೆ ಅವಿಧೇಯರಾಗಿ ಬದುಕಿದರೆ, ಸುವಾರ್ತೆಯಲ್ಲಿ ನಮ್ಮ ನಂಬಿಕೆ ಮತ್ತು ದೀಕ್ಷಾಸ್ನಾನ ಇದೆಲ್ಲಾ ನಮ್ಮ ದಂಡನೆಗೆ ಮಾತ್ರವೇ ಆಗಿದ್ದು ಆತನ ಆಜ್ಞೆಗಳನ್ನು ಯಾರು ಕೈಕೊಳ್ಳುತ್ತಾರೋ ಕಡೇ ದಿನದಲ್ಲಿ ಅವರು ಆಶೀರ್ವದಿಸಲ್ಪಡುವವರೊಂದಿಗೆ ಇರುತ್ತಾರೆ.

ಶ್ರೀ ಯೋಹಾನನು ತನ್ನ ಮೊದಲನೇ ಪತ್ರಿಕೆಯಲ್ಲಿ "ಆತನ ಆಜ್ಞೆಗಳನ್ನು

ಕೈಕೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ" (1 ಯೋಹಾ 3:24) ಎಂದು ಬರೆದಿರುತ್ತಾನೆ. ಯೇಸು ಕ್ರಿಸ್ತನು ಒಂದು ದೃಷ್ಟಾಂತವನ್ನು ಹೇಳುತ್ತಾ, "ಈ ನನ್ನ ಮಾತುಗಳನ್ನು ಕೇಳಿಯೂ ಅವುಗಳಂತೆ ನಡೆಯದ ಪ್ರತಿಯೊಬ್ಬನೂ ಉಸುಬಿನ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿ ಹೀನ ಮನುಷ್ಯನನ್ನು ಹೋಲುವನು" ಎಂಬುದಾಗಿ ಎಚ್ಚರಿಸಿದ್ದಾನೆ. (ಮತ್ತಾಯ 7:26). ಮತ್ತೊಂದು ಕಡೆ ಯೇಸು ಕ್ರಿಸ್ತನು, "ಯಾರಾದರೂ ನನ್ನನ್ನು ಪ್ರೀತಿಸುವವರಾವರೆ, ನನ್ನ ಮಾತನ್ನು ಕೈಕೊಂಡು ನಡೆಯುವನು. ಅವನನ್ನು ನನ್ನ ತಂದೆಯು ಪ್ರೀತಿಸುವನು. ಮತ್ತು ನಾವಿಬ್ಬರೂ ಬಂದು ಅವನ ಬಳಿಯಲ್ಲಿ ಬಿಡಾರ ಮಾಡಿಕೊಳ್ಳುವೆವು" ಎಂಬುದಾಗಿ ಹೇಳಿರುತ್ತಾನೆ. (ಯೋಹಾನ 14:23).

ಯಾಕೋಬನು ತನ್ನ ಪತ್ರಿಕೆಯಲ್ಲಿ, "ಮನುಷ್ಯನು ಕ್ರಿಯೆಗಳಿಂದ ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೇ ಹೊರತು ಬರೀ ನಂಬಿಕೆಯಿಂದಲ್ಲ." ವೆಂದು ಎಚ್ಚರಿಸುತ್ತಾನೆ. ಅಪೋಸ್ತಲನಾದ ಪೌಲನು ರೋಮಾಪುರದವರಿಗೆ ಬರೆಯುತ್ತಾ, "ಆತನು ಪ್ರತಿಯೊಬ್ಬನಿಗೂ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುತ್ತಾನೆ. ಯಾರು ಪ್ರಭಾವ ಮಾನ, ನಿರ್ಲಯತ್ವಗಳನ್ನು ಹೊಂದ ಬೇಕೆಂದು ಒಳ್ಳೆದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯ ಜೀವವನ್ನು ಕೊಡುವನು. ಯಾರು ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ ರೌದ್ರಗಳು ಬರುವವು. ಧರ್ಮ ಶಾಸ್ತ್ರ ಕೇಳಿದ ಮಾತ್ರದಿಂದಲೇ ಯಾರೂ ದೇವರ ಸನ್ನಿಧಿಯಲ್ಲಿ ನೀತಿವಂತರಾಗುವುದಿಲ್ಲ. ಅದನ್ನು ಅನುಸರಿಸುವವರೇ ನೀತಿವಂತರೆಂದು ನಿರ್ಣಯಿಸಲ್ಪಡುವರು'. ಎಂಬುದಾಗಿ ಎಚ್ಚರಿಸುತ್ತಾನೆ. (ರೋಮಾ 2:6-8, 13; ಯಾಕೋಬ 1:22; 1 ಯೋಹಾನ 2:4; ಯೋಹಾನ 15:14). ಕ್ರಿಸ್ತನ ಹಿಂದಿರುಗುವಿಕೆಯ ದಿನದಲ್ಲಿ ಅನೇಕರು ಸಮಾಧಿಗಳಿಂದ ಎದ್ದು ಬರುವರು. ಆದರೆ ಎದ್ದು ಬರುವವರಲ್ಲಿ ಎರಡು ಭಾಗಗಳಾಗುತ್ತವೆ. ಒಳ್ಳೇದನ್ನು ಮಾಡಿದವರಿಗೆ ನಿತ್ಯ ಜೀವಕ್ಕಾಗಿ ಪುನರುತ್ಥಾನವಾಗುವುದು. ಕೆಟ್ಟದನ್ನು ಮಾಡಿದವರಿಗ ತೀರ್ಪಿಗಾಗಿ ಪುನರುತ್ಥಾನವಾಗುವುದು (ಯೋಹಾನ 5:29). ನಾವು ಯಾವ ಗುಂಪಿಗೆ ಸೇರಬೇಕೆಂಬುದನ್ನು ಈಗಲೇ ತೀರ್ಮಾನಿಸಿಕೊಳ್ಳುವುದು ಸೂಕ್ತ. ಕಡೇ ದಿನದಲ್ಲಿ ಯಾವ ಗುಂಪಿಗೆ ಸೇರುತ್ತೇವೆಂದು ನಮ್ಮ ಕ್ರಿಯೆಗಳಿಂದಲೇ ತೀರ್ಮಾನವಾಗುತ್ತದೆ, ಅಲ್ಲವೇ? ಹಾಗಿದ್ದಲ್ಲಿ ನಮ್ಮ ನಡವಳಿಕೆ ಹೇಗಿರ ಬೇಕು? ಕೇವಲ ಅಭ್ಯಾಸಬಲದಿಂದ ದೇವಾಸ್ಥಾನಕ್ಕೆ ಹೋಗುವುದು, ಕಾಣಿಕೆ ಕೊಡುವುದು ಇವುಗಳಿಂದಲೊಳಿ ಯೇಸು ಕ್ರಿಸ್ತನು ಈ ವಿಷಯದಲ್ಲಿ ಏನು ಹೇಳಿದ್ದಾನೆ? ನನ್ನನ್ನು ಸ್ವಾಮೀ, ಸ್ವಾಮೀ, ಅನ್ನುವವರೆಲ್ಲರೂ ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸ ಬೇಡಿರಿ. ಪರಲೋಕದಲ್ಲಿರುವ ನನ್ನ

ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯಕ್ಕೆ ಸೇರುವನು. ಸ್ವಾಮೀ, ಸ್ವಾಮೀ, ನಿನ್ನ ಹೆಸರಿನ ಮೇಲೆ ನಾವು ಬೋಧನೆಗಳನ್ನು ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ? ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ—ನಾನೆಂದೂ ನಿಮ್ಮ ಗುರುತು ಕಾಣೆನು. ಧರ್ಮವನ್ನು ಮೀರಿ ನಡೆಯುವವರೇ, ನನ್ನಿಂದ ತೊಲಗಿ ಹೋಗಿರಿ ಎಂದು ಎಲ್ಲರ ಮುಂದೆ ಹೇಳಿ ಬಿಡುವೆನು (ಮತ್ತಾಯ 7:21-23).

ಆದುದರಿಂದ ನಾವು ಕ್ರಿಸ್ತನವರಾಗಿರುವುದೆಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವುದೆಂದರ್ಥ.

ಭಾ. ಚಂದುದಾಸ್.

---

ನಮ್ಮಲ್ಲಿ ಉಚಿತವಾಗಿ ದೊರೆಯುವ ಕರಪತ್ರ/ಕಿರು ಹೊತ್ತಗೆಗಳಿಗೆ ಬರೆಯಿರಿ.

1. ಕರ್ತನು ಹೀಗೆ ಹೇಳುತ್ತಾನೆ.
2. ನೀವು ತಿಳಿಯಲೇ ಬೇಕಾದ ಏಳು ಸಂಗತಿಗಳು.
3. ಲೂಸಿಫರನು ಯಾರು?
4. ಸತ್ಯದಲ್ಲಿ ಜೀವಿಸುವುದು.
5. ದೈನಂದಿನ ಸತ್ಯವೇದ ಪಠಣ ತಃಖ್ತೆ.
6. ಸೈತಾನನು-ಸಂಪ್ರದಾಯದ್ದೋ ಅಥವಾ ಸತ್ಯವೇದದ್ದೋ?

ಅಲ್ಲದೆ ಇತರೆ ಕೆಲವು ಭಾರತೀಯ ಭಾಷೆಗಳಲ್ಲಿಯೂ ದೊರೆಯುತ್ತವೆ.

---

ಸ್ಥಳೀಯ ವಿಳಾಸ :—

ದಿ ಕ್ರಿಸ್ಟ ಡೆಲ್ಫಿಯನ್ಸ್,
ಕೇರ್ ಆಫ್ ಸಿಟಿ ಡ್ರಗ್ ಹೌಸ್,
ರಾಜೇಂದ್ರ ಪ್ರಸಾದ್ ರಸ್ತೆ,
ಮಂಡ್ಯ 571 401.